ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ತಾವು ಉತ್ತರದಲ್ಲಿ ಆಗಮ ಪಂಡಿತರ ಅಭಿಪ್ರಾಯವನ್ನು ಪಡೆದು ಈ ಹಂತದಲ್ಲಿ ಅದನ್ನು ಪರಿಶೀಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ, ಸೋಮೇಶ್ವರ ದೇವಸ್ಥಾನವನ್ನು ಬೆಂಗಳೂರು ನಗರದ ಸಂಸ್ಥಾಪನಾಚಾರ್ಯ ಪಿತ್ಯ ಕೆಂಪೇಗೌಡರು ಆಗಮ ಶಾಸ್ತ್ರದ ಆಧಾರದಮೇಲೆ ಈ ಕೆಲಸವನ್ನು ಕೈಗೊಂಡಿದ್ದರೆ ಸರ್ಕಾರದವರು ಆಗಮ ಶಾಸ್ತ್ರದಂತೆ ಕಟ್ಟಕೂಡದು ಎಂದು ಹೇಳಿದ್ದೀರಿ, ಹಿಂದೆ ಆಗಮ ಪಂಡಿತರ ಸಲಹೆಯಂತೆ ದೇವಸ್ಥಾನದ ಗೋಡೆಯನ್ನು ಕಟ್ಟಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಅವರು ಯಾವ ಕಾರಣದಿಂದ ಕಟ್ಟಿದ್ದಾರೆ?

† ಶ್ರೀ ಎನ್ ಹುಚ್ಚಮಾಸ್ತಿಗೌಡ—ಇದುವರೆಗೆ ಲೀಸ್ ಮೇಲೆ ಅಲ್ಲಿಯ ಕೆಲಸಗಳನ್ನು ಕೊಟ್ಟು ಬಿಟ್ಟಿದ್ದಾರೆ. ಲೀಸ್ ಮೇಲೆ ಕೊಟ್ಟುಬಿಟ್ಟ ಜಾಗವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿ ೧೯ ಆಡಿ ಆಗಲ, ೨೯೫ ಆಡಿ ಉದ್ದ ಎಂದು ಒಪ್ಪಂದ ಮಾಡಿ ಕೊಟ್ಟಿರುವಾಗ ಮತ್ತೆ ಆಗಮ ಶಾಸ್ತ್ರಜ ರನ್ನು ಕೇಳುವ ಅಗತ್ಯ ಇಲ್ಲ.

ಶ್ರೀ ಕೆ. ಆರ್. ಶ್ರೀನಿವಾಸುಲುನಾಯ್ಡು.—ತಾವು ಕರಾರು ಕೊಡುವುದಕ್ಕೆ ಮೊದಲಿಗೆ ಗುತ್ತಿಗೆ ಕರಾರು ಹಾಗೂ ಶರತ್ತುಗಳು ಎಂದು ಹೇಳಿದ್ದೀರಿ. ಕರಾರು ಗುತ್ತಿಗೆ ವಿವರ ಕೊಡುತ್ತೀರಾ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದನ್ನು ಪ್ರತ್ಯೇಕವಾಗಿ ಸಭೆಯ ಮುಂದೆ ಇಡುತ್ತೇನೆ. ಅದ ಬಹಳ ಉದ್ದವಾಗಿ ಇದೆ. ೧೯ ಆಡಿ ಆಗಲ ೨೯೫ ಆಡಿ ಉದ್ದ ಎಂದು ಸೇರಿಸಿದಾಗ ಗೋಡೆ ಒಡೆದ ಜಾಗ ತೆಗೆದುಕೊಳ್ಳಬೇಕಾದ ಪರಿಸ್ಥಿತಿ ಬಾದೇ ಬರುತ್ತದೆ. ಆದುದರಿಂದ ನಾವು ಅದನ್ನು ತಪ್ಪಿಸುವುದಕ್ಕೆ ಅವಕಾಶ ಆಗಲಿಲ್ಲ. ಆದರೆ ಅದು ಕೋರ್ಟಿನಲ್ಲಿ ಯಾರಿಗೆ ಕೊಟ್ಟಿತ್ತೋ ಅವರು ಈಗ ಕೋರ್ಟಿದಲ್ಲಿ ವ್ಯಾಜ್ಯ ಹೂಡಿದ್ದಾರೆ ಅದು ನಡೆಯುತ್ತಿದೆ. ಶರತ್ತುಗಳನ್ನು ಎಷ್ಟರಮಟ್ಟಿಗೆ ಪಾಲಿಸಿದ್ದಾರೆ ಮಗೈರೆ ತೀರ್ಮಾನ ಮಾಡಬೇಕಾಗುತ್ತದೆ ಈ ತೀರ್ಮಾನ ಮಾಡುವುದಕ್ಕೆ ಕೋರ್ಟಿನಲ್ಲಿ ಕೇಸು ನಡೆಯುತ್ತಾ ಇರುವುದರಿಂದ ಸ್ವಲ್ಪ ನಿಧಾನವಾಗಿದೆ ಅಷ್ಟೆ.

ಶ್ರೀ ಟಿ. ಆರ್. ಶಾಮಣ್ಣ.—ಸೋಮೇಶ್ವರ ಟೆಂಪಲ್ಲಿಗೆ ಸೇರಿದ ಇಷ್ಟು ಉತ್ತಮವಾದ ಬೆಲೆ ಬಾಳ ತಕ್ಕಂಥ ಜಾಗವನ್ನು ಶ್ರೀಮತಿ ಮಿನಾಕ್ಷಮ್ಮನವರಿಗೆ ಯಾರ ಪ್ರಭಾವದಿಂದ ಕೊಟ್ಟಿದೆ ಎಂದು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—೨೬-೯-೧೯೭೦ನೇ ಇಸವಿಯಲ್ಲಿ ಇದು ಆಗಿರುವುದರಿಂದ ಯಾರ ಪ್ರಭಾವದಿಂದ ಎಷ್ಟರಮಟ್ಟಿಗೆ ಆಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದು ಕಷ್ಟ.

ಶ್ರೀ ಕೆ. ಆರ್, ಶ್ರೀನಿವಾಸಲು ನಾಯ್ಡು.—ಈ ತಮ್ಮ ನೀತಿಯಿಂದ ಕಂಟ್ರಾಕ್ಟ್‌ದಾರನಿಗೆ ೧೫ ಲಕ್ಷ ರೂಪಾಯಿ ಆದಾಯ ಬರುತ್ತಿದೆ ಈಗಲಾದರೂ ಎಚ್ಚೆತ್ತು ಕಂಟ್ರಾಕ್ಟ್ ತಪ್ಪಿಸಿ ಸರ್ಕಾರದವರೇ ಇದನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಾಗಲೇ ಹೇಳಿದೆ ಕೋರ್ಟಿನಲ್ಲಿ ಕೇಸು ನಡೆಯುತ್ತಿದೆ. ದೇವಸ್ಥಾನಕ್ಕೆ ಸಂಬಂಧಪಟ್ಟ ಭಕ್ತಾದಿಗಳ ಆಸಕ್ತಿ ಕೂಡ ಆಗಲೇ ಸರ್ಕಾರಕ್ಕೆ ಗೊತ್ತಾಗಿದೆ. ಇದನ್ನು ತಿಳಿದು ಮುಂದೆ ಏನು ಮಾಡಬೇಕು ಎಂದು ಸರ್ಕಾರ ತೀವ್ರ ಪರ್ಯಾಲೋಚನೆ ಮಾಡುತ್ತಾ ಇದೆ.

MADAM SPEAKER.—Question Nos. 181 and 285 may be taken up together as they relate to the Same matter.

ADVANCE INCREMENTS TO OFFICIALS POSSESSING ADDITIONAL QUALIFICATIONS

181. SRI G. PUTTASWAMY (Mudigere).—Will the Minister for Finance be pleased to State:—

(*a*) whether an advance increment to Assistants/First Division Clerks having additional qualifications has been granted;

(*b*) whether it has come to the notice of Government that such advance increment to other categories of N. G. O's, has not been sanctioned, and if so, the reasons therefor:

(*c*) whether the Government intend to extend the same benefit to the other categories of N. G, O's in the interest of equity and justice ?

SRI M. Y. GHORPADE (Minister for Finance).—

(*a*) No.

(*b*) No. Does not arise.

(*c*) Proposals or requests for the grant of advance increments to those possessing additional qualifications will be examined in the light of the *criteria* laid down.

ADVANCE INCREMENTS TO OFFICIALS POSSESSING ADDITIONAL QUALIFICATIONS

285. SRI K. D. PATIL (Huvinahipparge).—Will the Minister for Finance be pleased to state—

(*a*) whether it is a fact that Assistants/First Division Clerks passessing additional qualifications have been granted an advance increment;

(*b*) if so, the reason, if any, for limiting the grant of advance increment only to the above category:

(*c*) whether there is any proposal to extend the benefit of advance increment to other sections of the N. G. O's:

(*d*) if not, the reasons theoefor?

SRI M. Y. GHORPADE (Minister for Finance).—

(*a*) No.

(*b*) Does not arise.

(*c*) and (*d*) Proposals or requests for the grant of advance increments to those possessing additional qualifications will be Examined in the light of the *criteria* laid down.

ಶ್ರೀ ಜಿ. ಪುಟ್ಟಸ್ವಾಮಿ.—(೧) ಪ್ರಶ್ನೆಗೆ ಉತ್ತರವಾಗಿ ಹೆಚ್ಚಿನ ವಿದ್ಯಾರ್ಹತೆ ಉಳ್ಳವರಿಗೆ ಮುಂಗಡ ವಾರ್ಷಿಕ ಬಡ್ತಿಗಳನ್ನು ಮಂಜೂರು ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಆಧಾರ ಮತ್ತು ಅಂಶ ಯಾವು ಎಂದು ಹೇಳುತ್ತೀರಾ ?

† ಎಂ. ವೈ ಘೋರ್ಪಡೆ.—ಇದರ ಬಗ್ಗೆ ಈಗ ಒಂದು ವರದಿ ತಯಾರಾಗುತ್ತಾ ಇದೆ. ಡಿಪಾರ್ಟ್ ಮೆಂಟಿನಿಂದ ಇನ್‌ಫರ್‌ಮೇಷನ್ ತರಿಸುತ್ತಾ ಇದ್ದೇವೆ ಆಯಾಯ ಕೆಲಸಗಳಿಗೆ ಅನುಕೂಲ ಆಗುವ ರೀತಿಯಲ್ಲಿ ವಿಶೇಷವಾದ ತರಪೇತಿ ಪಡೆದಿದ್ದರೆ ಅವರಿಗೆ ಅಡ್ವಾನ್ಸ್ ಇನ್‌ಕ್ರಿಮೆಂಟ್ ಕೊಡಬೇಕು ಎಂದು ಪಾಲಿಸಿ ಇದೆ ಆದರೆ ಆಯಾಯ ಕೆಲಸಗಳಿಗೆ ಯಾವ ಒಂದು ಕ್ವಾಲಿಫಿಕೇಷನ್, ಆ ರೀತಿ ಟ್ರೀಟ್ ಮಾಡ ಬೇಕು ಇದರ ಬಗ್ಗೆ ಸ್ವಲ್ಪ ಪರಿಶೀಲನೆ ಮಾಡಬೇಕಾಗುತ್ತದೆ. ಇಷ್ಟರಲ್ಲೇ ಅದನ್ನು ಪರಿಶೀಲನೆ ಮಾಡಿ